ಸಾಹಿತ್ಯದ ವಿದ್ಯಾರ್ಥಿನಿಯಾಗಿ ಬರಹ ಲೋಕದತ್ತ ಬೆರಗಿನಿಂದ ಅಡಿಯಿಡುತ್ತಿರುವವರು ಸಿ.ನಾಗಿಣಿ. ಮೂಲತಃ ಕೊಪ್ಪಳ ಜಿಲ್ಲೆಯ ಗಂಗಾವತಿಯವರು. ಬೆಂಗಳೂರು ನಗರ ವಿಶ್ವವಿದ್ಯಾಲಯದಿಂದ ಪ್ರಥಮ ರಾಂಕ್ ಮತ್ತು ಚಿನ್ನದ ಪದಕದೊಡನೆ ಕನ್ನಡ ಎಂ.ಎ ಪದವಿ ಪಡೆದಿದ್ದಾರೆ. ತೆಲುಗು ಕಥೆಗಳನ್ನು ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಯುವ ಬರಹಗಾರರಾದ ನಾಗಿಣಿ ಸದ್ಯ ಬೆಂಗಳೂರಿನ ಐ. ಎಸ್. ಬಿ. ಆರ್. ಕಾನೂನು ಕಾಲೇಜಿನಲ್ಲಿ ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕರಾಗಿದ್ದಾರೆ.

ಬಿಟ್ಟಳು.

ಮಗಳಿಗೆ ಅಮೆರಿಕದ ಗಂಡು ತರಲು ಅನೂರಾಧ ಎಷ್ಟೊಂದು ಕಷ್ಟಪಟ್ಟಳೋ ಸೂರ್ಯಾರಾವನಿಗೆ ಮಾತ್ರ ಗೊತ್ತು. ಬೀಗತಿ ಕೇಳಿದ ಬೇಡಿಕೆಗಳನ್ನೆಲ್ಲಾ ಪೂರೈಸುವ ಹೊತ್ತಿಗೆ ಹೈರಾಣಾಗಿ ಹೋದಳು! ಮಗಳು ಗರ್ಭಿಣಿಯಾದರೆ ಬಾಣಂತನ ಮಾಡಿಸಲು ಅಮೆರಿಕಕ್ಕೆ ಹೋಗಬೇಕೆಂದು ಈಗಿನಿಂದಲೇ ಸಿದ್ಧತೆ ಮಾಡಿಕೊಳ್ಳುತ್ತಿದ್ದಳು. ಟಿಕೆಟು ಮಗಳೇ ಬುಕ್ ಮಾಡುತ್ತಾಳೆ. ಆದರೆ ಅವಳಿಗೂ ಒಂದಿಷ್ಟು ಡಾಲರ್ ಬೇಕಲ್ಲವೇ. ಹಾಗಾಗಿ ಈ ನಡುವೆ ಮತ್ತಷ್ಟು ಕಂಜೂಸಾಗಿ ಹಣ ಕೂಡಿಡುತ್ತಿದ್ದಳು.

'ಮಕ್ಕಳು ಮಾಡಿಕೊಳ್ಳಲು ಮಗಳಿಗೆ ಇನ್ನೂ ಸಮಯ ಇದೆ. ಅವಳು, ಅವಳ ಗಂಡ ಓಡಾಡುವ ಕಾರು ಕೊಳ್ಳಲು ಮಾಡಿದ ಸಾಲ, ಮನೆಗೆ ಕಟ್ಟಬೇಕಾದ ಇನ್‌ಸ್ಟಾಲ್‌ಮೆಂಟ್ ಬಾಕಿ ಇವೆ. ಇವೆಲ್ಲಾ ಒಂದು ಹಂತಕ್ಕೆ ಬರದ ಹೊರತು ಮಕ್ಕಳ ಯೋಚನೆ ಸಾಧ್ಯವಿಲ್ಲ. ಈಗಲೇ ಮಕ್ಕಳಂತೆ. ಪೂರ್ ಮಾಮಾ' ಅಂದು ನಕ್ಕು ಸುಮ್ಮನಾಗುತ್ತಿದ್ದಳು ಮಗಳು. ಈಗ 'ಪೂರ್ ಮಾಮಾ' ಅಮೆರಿಕದಲ್ಲಿ ಮಗಳ ವೈಭವ ನೋಡದೆಯೇ ಹೋಗಿಬಿಟ್ಟಳು! ಷಿ ಕುಡನ್ಟ್ ಮೇಕ್ ಇಟ್. ಆದರೆ ಅವಳಿಗೆ ಬಂದ ಕಾಯಿಲೆ ಯಾವುದೋ ಕ್ವಯಟ್ ಅಮೇಜಿಂಗ್.

'ಅಳಿಯ ಬಂದಿಲ್ಲವಾ ಅಮ್ಮಾ' ಸೂರ್ಯಾರಾವು ಮಗಳಿಗೆ ಕೇಳಿದ.

'ರವಿಗೆ ರಜೆ ಸಿಗಲಿಲ್ಲ ಪಾಪಾ. ಹಿ ವಾಸ್ ಸೋ ಸಾರಿ..ಹಿ ಕುಡನ್ಟ್ ಮೇಕ್ ಇಟ್' ಅಂದಳು. ಅವಳ ಹೆಸರು ರಜನಿ. 'ನಿನ್ನ ಅಮ್ಮ ಅಲ್ಲವಾ, ನೀನು ಹೋಗುವಿಯಂತೆ! ಬರುವಾಗ ನಿಮ್ಮ ಪಾಪಾನನ್ನು ಜೊತೆಗೆ ಕರೆದುಕೊಂಡು ಬಾ' ಅಂದಿದ್ದ ಆತ.

'ಹೆಣಕ್ಕೆ ಸ್ನಾನ ನಡೆಯಲಿ' ನೆಂಟರು ಹೇಳಿದರು. 'ಸ್ನಾನ ಮಾಡಿಸಿದರೆ ಮಾತ್ರೆಗಳೆಲ್ಲಾ ಕರಗಿ ಹೋಗಿ ದಹನ ಮಾಡಲು ಏನೂ ಉಳಿಯುವುದಿಲ್ಲ. ಅರಿಶಿನದ ನೀರು ಸಿಂಪಡಿಸಿ ಶುದ್ಧ ಮಾಡಿದರೆ ಸಾಕು' ಎಂದು ಅಲ್ಲಿದ್ದವರು ಯಾರೋ ಹೇಳಿದರು.

'ಹೆಣಕ್ಕೆ ಸ್ನಾನ ಮಾಡದೇ ಇದ್ದರೆ ಆತ್ಮ ಪುಣ್ಯಲೋಕಕ್ಕೆ ಹೋಗುವುದಿಲ್ಲ' ಅಂದಳು ಅಲ್ಲಿದ್ದ ಅಜ್ಜಿ. 'ಪವಿತ್ರ ಸ್ನಾನವಾ ಅರಿಶಿನದ ಶುದ್ಧೀಕರಣವಾ' ಕೆಲ ಹೊತ್ತು ಚರ್ಚೆ ನಡೆಯಿತು. ಅರಿಶಿನದ ನೀರಿಗೆ ಓಟು ಬಿದ್ದವು. 'ಹೆಣದ ಕಣ್ಣು ತೆರೆದೇ ಇವೆ' ಯಾರೋ ಅಂದರು. 'ಐ ಕಾನ್ಟ್ ಡೂ ಇಟ್' ಅಂದಳು ರಜನಿ.

ಸೂರ್ಯಾರಾವು ಪ್ರಯತ್ನ ಮಾಡಿದ. ಅವನಿಗೆ ಆಶ್ಚರ್ಯ. ಆಕೆ ಬದುಕಿದ್ದಾಗ ಎಷ್ಟೋಬಾರಿ ಹಾಗೆ ಕಣ್ಣು ಮುಚ್ಚಿದ್ದಿದೆ.

ಈಗ ಕಣ್ಣು ಮುಚ್ಚಿಕೊಳ್ಳುತ್ತಿಲ್ಲ. ಯಾಕಿರಬಹುದು? ಹೆಣ ಸಾಗಿಸುವಾಗ ಪೆಥಾಲಜಿ ಪ್ರೊಫೆಸರ್ ಪ್ರಕಾಶರಾವು ಏದುಸಿರು ಬಿಡುತ್ತಾ ಬಂದ. ಆತ ಅನೂರಾಧಾಳಿಗೆ ದೊಡ್ಡಮ್ಮನ ಮಗ. ಯಾವುದೋ ಉಪಕರಣಗಳನ್ನು ಜೊತೆಗೆ ತಂದಿದ್ದ.

'ನನ್ನ ಹೆಂಡತಿಯ ದೇಹದ ಮೇಲೆ ನಿನ್ನ ಪ್ರಯೋಗಕ್ಕೆ ನಾನು ಒಪ್ಪೋದಿಲ್ಲ' ಸೂರ್ಯಾರಾವು ತಡೆದ. ಅವನಿಗೆ ಪ್ರಕಾಶರಾವನನ್ನು ಕಂಡರೆ ಆಗುವುದಿಲ್ಲ. ಅನೂರಾಧಾಳಿಗೆ ಅವನನ್ನು ಕಂಡರೆ ಅಕ್ಕರೆ ಅನ್ನುವುದೇ ಅವನ ಸಿಟ್ಟಿಗೆ ಕಾರಣ.

'ನನ್ನ ಹೆಂಡತಿಯನ್ನು ಸಕಲ ಮರ್ಯಾದೆಗಳಿಂದ ಸ್ವರ್ಗಕ್ಕೆ ಕಳಿಸುವುದು ನನ್ನ ಜವಾಬ್ದಾರಿ. ಆಕೆಯ ದೇಹಕ್ಕೆ ಅಂಟಿಕೊಂಡ ಈ ಕಳಂಕದಿಂದ ನಾನು ಕಂಗೆಟ್ಟಿ ಹೋಗಿರುವಾಗ ನಿನ್ನ ಸಂಶೋಧನೆ ಬೇರೆ ಕೇಡು' ಸೂರ್ಯಾರಾವು ಸಿಡುಕಿದ.

'ಹಾಗಲ್ಲ ಸೂರ್ಯಂ. ಇದು ವೈದ್ಯ ಜಗತ್ತಿಗೆ ಎದುರಾದ ಸವಾಲು. ಇದು ಯಾಕೆ ಹೀಗೆ ಜರುಗಿತೋ ತಿಳಿದುಕೊಳ್ಳುವುದು ನಮ್ಮ ಹೊಣೆ. ಇದು ನಮಗೆ ಅತ್ಯಗತ್ಯ' ಎಂದು ಪ್ರಕಾಶರಾವು ಹಟ ಹಿಡಿದ.